KACM200001252015

# ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಕಡೂರು

ಉಪಸ್ಥಿತರುಃ- ಶ್ರೀಮತಿ. ಸುಜಾತ ಸುವರ್ಣ ಬಿ,
ಬಿ.ಕಾಂ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,
ಕಡೂರು, ಚಿಕ್ಕಮಗಳೂರು ಜಿಲ್ಲೆ.

**ಅಸಲು ದಾವಾ ಸಂಖ್ಯೆ 5/2015**

ದಿನಾಂಕಃ 1 ನೇ ಏಪ್ರಿಲ್-2023.

ವಾದಿಯರು ಃ

1. ಶ್ರೀಮತಿ. ಹನುಮಂತಪ್ಪ,
ಬಿನ್ ಲೇಟ್ ತಿಮ್ಮಪ್ಪ,
ವಯಸ್ಸುಃ ಸುಮಾರು 60 ವರ್ಷ,
ವ್ಯವಸಾಯಗಾರರು,

2. ಶ್ರೀ ಸಣ್ಣಗೋವಿಂದಪ್ಪ,
ಬಿನ್ ಲೇಟ್ ತಿಮ್ಮಪ್ಪ,
ವಯಸ್ಸುಃ ಸುಮಾರು 48 ವರ್ಷ,
ವ್ಯವಸಾಯಗಾರರು,

ವಾದಿಯರಿಬ್ಬರ ವಾಸಃ
ಹುಲ್ಲೇಹಳ್ಳಿ ಗ್ರಾಮ, ಬೀರೂರು ಅಂಚೆ,
ಬೀರೂರು ಹೋಬಳಿ,
ಕಡೂರು ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

(ಪರವಾಗಿಃ ಶ್ರೀ ಎಂ.ಓ. ಜಗದೀಶ, ವಕೀಲರು)

- ವಿರುದ್ಧ -

ಪ್ರತಿವಾದಿಯರು ಃ

1. ಶ್ರೀ ಓಬಳಪ್ಪ,
ಬಿನ್ ಲೇಟ್ ಸತ್ತಪ್ಪ,
ವಯಸ್ಸುಃ ಸುಮಾರು 80 ವರ್ಷ,
ವ್ಯವಸಾಯಗಾರರು,

2. ಶ್ರೀಮತಿ. ತಿಮ್ಮಮ್ಮ,
ಕೋಂ ಲೇಟ್ ಸಗುನಪ್ಪ,
ವಯಸ್ಸುಃ ಸುಮಾರು 75 ವರ್ಷ,
ಗೃಹಿಣಿ,

3. ಶ್ರೀ ಸಗುನಿ ರಂಗಪ್ಪ,
ಬಿನ್ ಲೇಟ್ ಸಗುನಪ್ಪ,
ವಯಸ್ಸುಃ ಸುಮಾರು 48 ವರ್ಷ,

4. ಶ್ರೀಮತಿ. ರತ್ನಮ್ಮ,
ತಂದೆಃ ಲೇಟ್ ಸಗುನಪ್ಪ,
ವಯಸ್ಸುಃ ಸುಮಾರು 45 ವರ್ಷ,

5. ಶ್ರೀಮತಿ. ಸಾಕಮ್ಮ,
ತಂದೆಃ ಲೇಟ್ ಸಗುನಪ್ಪ,
ವಯಸ್ಸುಃ ಸುಮಾರು 35 ವರ್ಷ,

6. ಶ್ರೀ ಗೋವಿಂದಪ್ಪ,
ಬಿನ್ ಲೇಟ್ ಸತ್ತಪ್ಪ,
ವಯಸ್ಸುಃ ಸುಮಾರು 70 ವರ್ಷ,
ವ್ಯವಸಾಯಗಾರರು,
ಇವರು ಮೃತರಾಗಿದ್ದು, ಇವರ
ವಾರಸುದಾರರು

(ಎ) ಶ್ರೀಮತಿ. ತಿಮ್ಮಮ್ಮ,
ಕೋಂ ಲೇಟ್ ಗೋವಿಂದಪ್ಪ,
ವಯಸ್ಸುಃ ಸುಮಾರು 68 ವರ್ಷ,
ಗೃಹಿಣಿ,

(ಬಿ) ಶ್ರೀ ಕುಮಾರಪ್ಪ,
ಬಿನ್ ಲೇಟ್ ಗೋವಿಂದಪ್ಪ,
ವಯಸ್ಸುಃ ಸುಮಾರು 50 ವರ್ಷ,

(ಸಿ) ಶ್ರೀ ನರಸಿಂಹಪ್ಪ,
ಬಿನ್ ಲೇಟ್ ಗೋವಿಂದಪ್ಪ,
ವಯಸ್ಸುಃ ಸುಮಾರು 35 ವರ್ಷ,

(ಡಿ) ಶ್ರೀ ವೆಂಕಟೇಶ,
ಬಿನ್ ಲೇಟ್ ಗೋವಿಂದಪ್ಪ,
ವಯಸ್ಸುಃ ಸುಮಾರು 32 ವರ್ಷ,

ಪ್ರತಿವಾದಿ-1 ರಿಂದ 5 ಹಾಗೂ
ಪ್ರತಿವಾದಿ 6(ಎ) ಯಿಂದ (ಡಿ) ರವರ
ವಾಸಃ ಹುಲ್ಲೇಹಳ್ಳಿ ಗ್ರಾಮ,
ಬೀರೂರು ಹೋಬಳಿ,
ಕಡೂರು ತಾಲ್ಲೂಕು.

7. ಶ್ರೀಮತಿ. ಜಯಮ್ಮ,
ಕೋಂ ರಾಜಪ್ಪ,
ತಂದೆಃ ಲೇಟ್ ತಿಮ್ಮಪ್ಪ,
ವಯಸ್ಸುಃ ಸುಮಾರು 55 ವರ್ಷ,
ಗೃಹಿಣಿ,
ವಾಸಃ ಎಮ್ಮೆದೊಡ್ಡಿ - ರಂಗೇನಹಳ್ಳಿ ಗ್ರಾಮ,
ಬೀರೂರು ಅಂಚೆ, ಬೀರೂರು ಹೋಬಳಿ,
ಕಡೂರು ತಾಲ್ಲೂಕು,

(1 ನೇ ಪ್ರತಿವಾದಿ ಪರವಾಗಿಃ ಶ್ರೀ ಹೆಚ್.ಎನ್. ಸುನೀಲ್ ಕುಮಾರ್ / ಶ್ರೀ ಎಸ್.ಎನ್. ಆನಂದ್, ವಕೀಲರು)

(2 ನೇ ಪ್ರತಿವಾದಿ ಮತ್ತು ಪ್ರತಿವಾದಿ 6(ಎ) ಯಿಂದ (ಡಿ) ಪರವಾಗಿಃ ಶ್ರೀ ಬಿ.ರಾಜು, ವಕೀಲರು)

(3 ನೇ ಪ್ರತಿವಾದಿ ಪರವಾಗಿಃ ಶ್ರೀ ಕೆ.ಎಸ್.ರೇಣುಕಾಪ್ರಸಾದ್, ವಕೀಲರು)

(4 ಮತ್ತು 5 ನೇ ಪ್ರತಿವಾದಿಯರು - ಏಕಪಕ್ಷೀಯ)

(7 ನೇ ಪ್ರತಿವಾದಿ ಪರವಾಗಿಃ ಶ್ರೀ ಕೆ.ಆರ್.ಶಿವಕುಮಾರ್, ವಕೀಲರು)

<u>ಮಧ್ಯಂತರ ಅರ್ಜಿ ಸಂಖ್ಯೆ-23 ರ ಪಕ್ಷಗಾರರು</u>

ಅರ್ಜಿದಾರರು/
ವಾದಿಯರು ಃ ಶ್ರೀ ಹನುಮಂತಪ್ಪ ಮತ್ತು ಇನ್ನೊಬ್ಬರು.

- ವಿರುದ್ಧ -

ಎದುರುದಾರರು /
ಪ್ರತಿವಾದಿಯರು ಃ ಶ್ರೀ ಓಬಳಪ್ಪ ಮತ್ತು ಇತರರು.

<u>ಮಧ್ಯಂತರ ಅರ್ಜಿ ಸಂಖ್ಯೆ-23 ರ ಮೇಲಿನ ಆದೇಶ</u>

ಅರ್ಜಿದಾರರು / ವಾದಿಯರು ಮಧ್ಯಂತರ ಅರ್ಜಿ ಸಂಖ್ಯೆ-23 ನ್ನು ಕ್ರಮಾದೇಶ XXIII ನಿಯಮ 1 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ನ್ಯಾಯ ಮತ್ತು ಸಮಾನತೆಯ ಹಿತಾಸಕ್ತಿಯಲ್ಲಿ ಹೊಸ ದಾವೆಯನ್ನು ಹೂಡುವ ಸ್ವಾತಂತ್ರ್ಯವನ್ನು ಅವರಿಗೆ ನೀಡಿ ದಾವೆಯನ್ನು ಹಿಂತೆಗೆದುಕೊಳ್ಳಲು ಅನುಮತಿ ನೀಡಬೇಕೆಂದು ಕೋರಿಕೊಂಡಿರುತ್ತಾರೆ. *<u>ಪಿ.ಡಬ್ಲ್ಯೂ-1 ರವರ ಮುಂದುವರೆದ ಪಾಟೀ ಸವಾಲಿಗಾಗಿ ನಿಗಧಿಪಡಿಸಿದ ಮುದ್ದತ್ತಿನಂದು ವಾದಿಯರು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.</u>*

2. ಮಧ್ಯಂತರ ಅರ್ಜಿಗೆ ಪೂರಕವಾಗಿ ಅರ್ಜಿದಾರರು / 2 ನೇ ವಾದಿಯು ಅವರ ಪರವಾಗಿ ಹಾಗೂ 1 ನೇ ವಾದಿಯ ಪರವಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿ, ತಮ್ಮ ಪ್ರಮಾಣ ಪತ್ರದಲ್ಲಿ, ದಾವೆಯನ್ನು ಸಲ್ಲಿಸುವ ಸಮಯದಲ್ಲಿ ತಪ್ಪು ಮತ್ತು ಅಜಾಗರೂಕತೆಯ ಕಾರಣದಿಂದಾಗಿ ದಾವಾ ಶೆಡ್ಯೂಲ್ ಸ್ವತ್ತುಗಳಲ್ಲಿನ ಚಕ್ಕುಬಂದಿಯು ತಪ್ಪಾಗಿ ನಮೂದಿಸಲಾಗಿರುತ್ತದೆ ಹಾಗೂ ಸದರಿ ದಾವೆಯಲ್ಲಿ ಅವಶ್ಯಕ ಪಕ್ಷಗಾರರನ್ನು ಸೇರಿಸಿರುವುದಿಲ್ಲ ಮತ್ತು ದಾವಾ ಶೆಡ್ಯೂಲ್ ಸ್ವತ್ತುಗಳ ಹಿಂದಿನ ಇತಿಹಾಸವನ್ನು ದಾವೆಯಲ್ಲಿ ಸವಿಸ್ತಾರವಾಗಿ ವಿವರಿಸಿರುವುದಿಲ್ಲ. ಸದರಿ ಸಂಗತಿಗಳು ಇತ್ತೀಚೆಗೆ ತಿಳಿದು ಬಂದಿರುವ ಕಾರಣ ಹಾಗೂ ವಾದಪತ್ರದಲ್ಲಿ ತಾಂತ್ರಿಕ ನ್ಯೂನ್ಯತೆ ಕಾರಣಗಳಿಂದ ದಾವೆಯನ್ನು ಮುಂದುವರೆಸಲು ಸಾಧ್ಯವಿಲ್ಲದೇ ಇರುವುದರಿಂದ, ಅವರಿಗೆ ದಾವೆಯನ್ನು ಹಿಂತೆಗೆದುಕೊಳ್ಳಲು ಮತ್ತು ತಪ್ಪನ್ನು ಸರಿಪಡಿಸಿಕೊಳ್ಳುವಂತೆ ಸಲಹೆಯನ್ನು ನೀಡಿದ್ದು, ಆದ್ದರಿಂದ ಅವರು ದಾವೆಯನ್ನು ಹಿಂತಿರುಗಿ ಪಡೆದುಕೊಳ್ಳಲು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

3. 3 ನೇ ಪ್ರತಿವಾದಿಯು ಮಧ್ಯಂತರ ಅರ್ಜಿ-23 ಕ್ಕೆ ತಕರಾರನ್ನು ಸಲ್ಲಿಸಿದ್ದು, ಅವರ ತಕರಾರಿನ ಸಾರಾಂಶ ಈ ಕೆಳಕಂಡಂತಿರುತ್ತದೆ.

ಅರ್ಜಿದಾರರು ಸಲ್ಲಿಸಿದ ಅರ್ಜಿಯು ಕಾನೂನಿನಡಿಯಲ್ಲಾಗಲೀ ಅಥವಾ ವಸ್ತು ಸ್ಥಿತಿಯಲ್ಲಾಗಲೀ ಊರ್ಜಿತವಾಗಿರುವುದಿಲ್ಲ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರಗಳು ಸುಳ್ಳಿನಿಂದ ಕೂಡಿದ್ದು, ಸತ್ಯವಾದ ಅಂಶಗಳನ್ನು ನಿಗ್ರಹಿಸಲ್ಪಟ್ಟಿವೆ. ದಾವೆಯು ಪಿ.ಡಬ್ಲ್ಯೂ-1 ರವರ ಪಾಟೀ ಸವಾಲಿನ ಹಂತದಲ್ಲಿರುವಾಗ, ಪಿ.ಡಬ್ಲ್ಯೂ-1 ರವರು ನ್ಯಾಯಾಲಯಕ್ಕೆ ಹಾಜರಾಗದೇ ಇದ್ದುದರಿಂದ ಅವರಿಗೆ ಈ ದಾವೆಯನ್ನು ಮುಂದುವರೆಸಲು ಇಷ್ಟ ಇರುವುದಿಲ್ಲವೆಂದು ಗೊತ್ತಾಗುತ್ತದೆ. ವಾದಿಯರು ದಾವೆಯಲ್ಲಿ

ತಿದ್ದುಪಡಿ ಅಥವಾ ಇತರೆ ಪರಿಹಾರವನ್ನು ಕೋರಬೇಕಾಗಿದ್ದಲ್ಲಿ ವಾದಪತ್ರವನ್ನು ತಿದ್ದುಪಡಿ ಮಾಡಿಕೊಳ್ಳಬೇಕಾಗಿರುತ್ತದೆ, ಆದರೆ ಸದರಿ ದಾವೆಯನ್ನು ಪಾಲು ವಿಭಜನೆ ಕೋರಿ ಸಲ್ಲಿಸಿದ್ದು, ಈಗಾಗಲೇ ಸದರಿ ದಾವೆಗೆ ಏಳು ವರ್ಷಗಳು ಕಳೆದಿದ್ದು, ಪ್ರಸ್ತುತ ದಾವೆಯನ್ನು ಹಿಂಪಡೆದುಕೊಳ್ಳಲು ವಾದಿಯರು ಅನುಮತಿಯನ್ನು ಕೋರುತ್ತಿರುವುದು ಕಾನೂನಿಗೆ ವಿರುದ್ಧವಾಗಿರುತ್ತದೆ. ವಾದಿಯರಿಗೆ ಸಾಕಷ್ಟು ಸಮಯಾವಕಾಶ ನೀಡಿದರೂ ಸಹ ವಾದಿಯರು ಅದರ ಉಪಯೋಗವನ್ನು ಪಡೆದುಕೊಳ್ಳದೇ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ ಹಾಗೂ ದಾವೆಯ ಪ್ರಕ್ರಿಯೆಗಳನ್ನು ಮುಂದೂಡುವ ಸಲುವಾಗಿ ವಾದಿಯರು ಕಾನೂನಿನ ಪ್ರಕ್ರಿಯೆಗಳನ್ನು ತಪ್ಪಾಗಿ ಬಳಸಿಕೊಂಡಿದ್ದು, ಅರ್ಜಿಯು ಸಮರ್ಥನೀಯವಾಗಿರುವುದಿಲ್ಲ. ಆದ್ದರಿಂದ ಅರ್ಜಿಯನ್ನು ಖರ್ಚು ಸಹಿತ ವಜಾಗೊಳಿಸಬೇಕೆಂದು ಕೋರಿರುತ್ತಾರೆ.

4. ಪ್ರತಿವಾದಿ-6(ಎ) ಯಿಂದ (ಡಿ) ರವರು ಮಧ್ಯಂತರ ಅರ್ಜಿ-23 ಕ್ಕೆ ತಕರಾರನ್ನು ಸಲ್ಲಿಸಿದ್ದು, ಅವರ ತಕರಾರಿನ ಸಾರಾಂಶ ಈ ಕೆಳಕಂಡಂತಿರುತ್ತದೆ.

ಅರ್ಜಿದಾರರು ಸಲ್ಲಿಸಿದ ಅರ್ಜಿಯು ಕಾನೂನಿನಡಿಯಲ್ಲಾಗಲೀ ಅಥವಾ ವಸ್ತು ಸ್ಥಿತಿಯಲ್ಲಾಗಲೀ ಊರ್ಜಿತವಾಗಿರುವುದಿಲ್ಲ. ಅರ್ಜಿದಾರರು ಪ್ರತಿವಾದಿಯರ ವಿರುದ್ಧ ಪಾಲು ವಿಭಜನೆ ಕೋರಿ ದಾವೆಯನ್ನು ಹೂಡಿದ್ದು, ಸದರಿ ದಾವೆಯಲ್ಲಿ ವಾದಿಯರ ವಿಚಾರಣೆ ಮುಗಿದ ನಂತರ ಪ್ರತಿವಾದಿಯರ ವಿಚಾರಣೆಯ ಹಂತದಲ್ಲಿರುತ್ತದೆ. ಮೇಲಾಗಿ ಪ್ರತಿವಾದಿಯರ ಸಾಕ್ಷಿ ವಿಚಾರಣೆಯು ಈ ಹಂತದಲ್ಲಿ ಭಾಗಶಃ ಪೂರ್ಣಗೊಂಡಿರುತ್ತದೆ. ವಾದಿಯರು ಈ ದಾವೆಯ ವಸ್ತು ವಿಷಯದ ಕಾರಣದ ಮೇಲೆ ಹೊಸ

ದಾವೆಯನ್ನು ಹೂಡಲು ಸ್ವಾತಂತ್ರ್ಯವನ್ನು ಕಾಯ್ದಿರಿಸಿಕೊಂಡು, ಈ ದಾವೆಯನ್ನು ಹಿಂಪಡೆಯಲು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ವಾದಿಯರು ದಾವೆಯನ್ನು ಹಿಂಪಡೆಯಲು ಈ ಪ್ರತಿವಾದಿಯರಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲ, ಆದರೆ ವಿಭಜನೆಯ ದಾವೆಗೆ ಸಂಬಂಧಿಸಿದಂತೆ ಹೊಸ ದಾವೆಯನ್ನು ಸಲ್ಲಿಸಲು ಸ್ವಾತಂತ್ರ್ಯವನ್ನು ಕಾಯ್ದಿರಿಸಿಕೊಳ್ಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ವಾದಿಯರು ಏಳು ವರ್ಷಗಳ ನಂತರ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿದ್ದು, ಹೆಚ್ಚು ಕಾಲ ವಿಳಂಬವಾಗಿರುತ್ತದೆ. ಪ್ರತಿವಾದಿಯರಿಗೆ ತೊಂದರೆ ನೀಡುವ ಸಲುವಾಗಿ ವಾದಿಯರು ಕಾನೂನಿನ ನಿಬಂಧನೆಯನ್ನು ದುರುಪಯೋಗಪಡಿಸಿಕೊಂಡು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ದಾವೆಯನ್ನು ಹಿಂಪಡೆಯಲು ವಾದಿಯರು ಯಾವುದೇ ಸಕಾರಣವನ್ನು ನೀಡಿರುವುದಿಲ್ಲ ಮತ್ತು ತಮ್ಮ ಪ್ರಮಾಣ ಪತ್ರದಲ್ಲಿ ವಿವರಿಸಿರುವ ಕಾರಣವು ನಂಬಲು ಅರ್ಹವಾಗಿರುವುದಿಲ್ಲ. ಮೇಲಾಗಿ ದಾವೆಯಲ್ಲಿ ಯಾವುದಾದರೂ ತಾಂತ್ರಿಕ ದೋಷಗಳು ಇದ್ದಲ್ಲಿ ಅದನ್ನು ತಿದ್ದುಪಡಿಯ ಮೂಲಕ ಸರಿಪಡಿಸಿಕೊಳ್ಳುವ ಅವಕಾಶವಿದ್ದು, ದಾವೆಯನ್ನು ಹಿಂಪಡೆದುಕೊಳ್ಳಲು ಅರ್ಜಿಯನ್ನು ಸಲ್ಲಿಸುವುದು ಸಮಂಜಸವಾಗಿರುವುದಿಲ್ಲ.

ವಾದಿಯರು ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಕಾನೂನು ನಿಬಂಧನೆಗಳನ್ನು ದುರುಪಯೋಗಪಡಿಸಿಕೊಂಡು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ವಾದಿಯರು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿದ್ದಲ್ಲದೇ ಸರಿಯಾದ ಆಧಾರವಿಲ್ಲದೇ ಪ್ರಸ್ತುತ ಅರ್ಜಿಯನ್ನು

ಸಲ್ಲಿಸಿರುತ್ತಾರೆ. ಆದ್ದರಿಂದ, ಮಧ್ಯಂತರ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

5. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು.

6. ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿರುವ ಅಂಶಗಳುಃ-

1. ವಾದಿಯು ಮಧ್ಯಂತರ ಅರ್ಜಿ-23 ರಲ್ಲಿ ಕೋರಿದಂತೆ, ಅವರಿಗೆ ಈ ದಾವೆಯ ವಸ್ತು ವಿಷಯದ ಕಾರಣಕ್ಕಾಗಿ ಹೊಸ ದಾವೆಯನ್ನು ಹೂಡುವ ಸ್ವಾತಂತ್ರ್ಯವನ್ನು ಕಾಯ್ದಿರಿಸಿ, ಈ ದಾವೆಯನ್ನು ಹಿಂತೆಗೆದುಕೊಳ್ಳಲು ಅನುಮತಿ ನೀಡಬೇಕೆಂದು ಸಕಾರಣವನ್ನು ನೀಡಿರುತ್ತಾರೆಯೇ?
2. ವಾದಿಯ ಅರ್ಜಿಯನ್ನು ಪುರಸ್ಕರಿಸಲು ಸಕಾರಣ ಇದೆಯೇ?
3. ಯಾವ ಆದೇಶ?

7. ನ್ಯಾಯಾಲಯದ ಮುಂದಿರುವ ಅಂಶಗಳನ್ನು, ದಾಖಲೆಗಳನ್ನು ಹಾಗೂ ಉಭಯ ವಕೀಲರ ಪರ ವಾದವನ್ನು ಆಲಿಸಿ, ಈ ಮೇಲ್ಕಂಡ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದೆ.

ಅಂಶ-1ಃ ನಕಾರಾತ್ಮಕವಾಗಿ,
ಅಂಶ-2ಃ ನಕಾರಾತ್ಮಕವಾಗಿ,
ಅಂಶ-3ಃ ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದದಂತೆ.

## ಕಾ ರ ಣ ಗಳು

8. ಅಂಶ-1 ಮತ್ತು 2ಃ ಈ ಎರಡೂ ಅಂಶಗಳು ಒಂದಕ್ಕೊಂದು ಪೂರಕವಾಗಿದ್ದರಿಂದ, ಅವುಗಳನ್ನು ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ಅರ್ಜಿದಾರರು / ವಾದಿಯರು ಮಧ್ಯಂತರ ಅರ್ಜಿ-23 ನ್ನು ಸಲ್ಲಿಸಿ, ದಾವೆಯನ್ನು ಸಲ್ಲಿಸುವ ಸಮಯದಲ್ಲಿ ತಪ್ಪು ಮತ್ತು ಅಜಾಗರೂಕತೆಯ ಕಾರಣದಿಂದಾಗಿ ದಾವಾ ಶೆಡ್ಯೂಲ್ ಸ್ವತ್ತುಗಳಲ್ಲಿನ ಚಕ್ಕುಬಂದಿಯು ತಪ್ಪಾಗಿ ನಮೂದಿಸಲಾಗಿರುತ್ತದೆಂದು, ಸದರಿ ದಾವೆಯಲ್ಲಿ ಅವಶ್ಯಕ ಪಕ್ಷಗಾರರನ್ನು ಸೇರಿಸಿರುವುದಿಲ್ಲವೆಂದು, ದಾವಾ ಶೆಡ್ಯೂಲ್ ಸ್ವತ್ತುಗಳ ಹಿಂದಿನ ಇತಿಹಾಸವನ್ನು ದಾವೆಯಲ್ಲಿ ಸವಿಸ್ತಾರವಾಗಿ ವಿವರಿಸಿರುವುದಿಲ್ಲ ಹಾಗೂ ಸದರಿ ಸಂಗತಿಗಳು ಇತ್ತೀಚೆಗೆ ತಿಳಿದು ಬಂದಿರುವ ಕಾರಣ ಹಾಗೂ ವಾದಪತ್ರದಲ್ಲಿ ವಿಧ್ಯುಕ್ತ ಹಾಗೂ ತಾಂತ್ರಿಕ ನ್ಯೂನ್ಯತೆ ಕಾರಣಗಳಿಂದ ದಾವೆಯನ್ನು ಮುಂದುವರೆಸಲು ಸಾಧ್ಯವಿಲ್ಲದೇ ಇರುವುದರಿಂದ, ಅವರಿಗೆ ದಾವೆಯನ್ನು ಹಿಂಪಡೆದುಕೊಳ್ಳಲು ಅನುಮತಿಯನ್ನು ನೀಡಬೇಕೆಂದು ಕೋರಿಕೊಂಡಿರುತ್ತಾರೆ.

9. 3 ನೇ ಪ್ರತಿವಾದಿಯ ಪ್ರಕಾರ, ಪಿ.ಡಬ್ಲ್ಯೂ-1 ರವರು ನ್ಯಾಯಾಲಯಕ್ಕೆ ಹಾಜರಾಗದೇ ಇದ್ದುದರಿಂದ ಅವರಿಗೆ ಈ ದಾವೆಯನ್ನು ಮುಂದುವರೆಸಲು ಇಷ್ಟ ಇರುವುದಿಲ್ಲವೆಂದು ಗೊತ್ತಾಗುತ್ತದೆ, ವಾದಿಯರು ದಾವೆಯಲ್ಲಿ ತಿದ್ದುಪಡಿ ಅಥವಾ ಇತರೆ ಪರಿಹಾರವನ್ನು ಕೋರಬೇಕಾಗಿದ್ದಲ್ಲಿ ವಾದಪತ್ರವನ್ನು ತಿದ್ದುಪಡಿ ಮಾಡಿಕೊಳ್ಳಬೇಕಾಗಿರುತ್ತದೆ, ಆದರೆ ಸದರಿ ದಾವೆಯನ್ನು ಪಾಲು ವಿಭಜನೆ ಕೋರಿ ಸಲ್ಲಿಸಿದ್ದು, ಈಗಾಗಲೇ ಸದರಿ ದಾವೆಗೆ ಏಳು ವರ್ಷಗಳು ಕಳೆದಿದ್ದು, ಪ್ರಸ್ತುತ ದಾವೆಯನ್ನು

ಹಿಂಪಡೆದುಕೊಳ್ಳಲು ವಾದಿಯರು ಅನುಮತಿಯನ್ನು ಕೋರುತ್ತಿರುವುದು ಕಾನೂನಿಗೆ ವಿರುದ್ಧವಾಗಿರುತ್ತದೆ. ವಾದಿಯರಿಗೆ ಸಾಕಷ್ಟು ಸಮಯಾವಕಾಶ ನೀಡಿದರೂ ಸಹ ವಾದಿಯರು ಅದರ ಉಪಯೋಗವನ್ನು ಪಡೆದುಕೊಳ್ಳದೇ ಸುಲಭವಾಗಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ ಹಾಗೂ ದಾವೆಯ ಪ್ರಕ್ರಿಯೆಗಳನ್ನು ಮುಂದೂಡುವ ಸಲುವಾಗಿ ವಾದಿಯರು ಕಾನೂನಿನ ಪ್ರಕ್ರಿಯೆಗಳನ್ನು ತಪ್ಪಾಗಿ ಬಳಸಿಕೊಂಡಿದ್ದು, ಅರ್ಜಿಯು ಸಮರ್ಥನೀಯವಾಗಿರುವುದಿಲ್ಲ ಎಂಬುದಾಗಿರುತ್ತದೆ.

**10.** ಪ್ರತಿವಾದಿ-6(ಎ) ಯಿಂದ (ಡಿ) ರವರ ಪ್ರಕಾರ, ಪ್ರತಿವಾದಿಯರ ಸಾಕ್ಷಿ ವಿಚಾರಣೆಯು ಈ ಹಂತದಲ್ಲಿ ಭಾಗಶಃ ಪೂರ್ಣಗೊಂಡಿದ್ದು, ಪ್ರಸ್ತುತ ವಾದಿಯರು ಈ ದಾವೆಯ ವಸ್ತು ವಿಷಯದ ಕಾರಣದ ಮೇಲೆ ಹೊಸ ದಾವೆಯನ್ನು ಹೂಡಲು ಸ್ವಾತಂತ್ರ್ಯವನ್ನು ಪಡೆದುಕೊಂಡು, ಈ ದಾವೆಯನ್ನು ಹಿಂಪಡೆಯಲು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ, ಆದರೆ ವಿಭಜನೆಯ ದಾವೆಗೆ ಸಂಬಂಧಿಸಿದಂತೆ ಹೊಸ ದಾವೆಯನ್ನು ಸಲ್ಲಿಸಲು ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ, ವಾದಿಯರು ಏಳು ವರ್ಷಗಳ ನಂತರ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿದ್ದು, ಹೆಚ್ಚು ಕಾಲ ವಿಳಂಬವಾಗಿರುತ್ತದೆ, ಪ್ರತಿವಾದಿಯರಿಗೆ ತೊಂದರೆ ನೀಡುವ ಸಲುವಾಗಿ ವಾದಿಯರು ಕಾನೂನಿನ ನಿಬಂಧನೆಯನ್ನು ದುರುಪಯೋಗಪಡಿಸಿಕೊಂಡು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ, ದಾವೆಯನ್ನು ಹಿಂಪಡೆಯಲು ವಾದಿಯರು ಯಾವುದೇ ಸಕಾರಣವನ್ನು ನೀಡಿರುವುದಿಲ್ಲ ಮತ್ತು ತಮ್ಮ ಪ್ರಮಾಣ ಪತ್ರದಲ್ಲಿ ವಿವರಿಸಿರುವ ಕಾರಣವು ನಂಬಲು ಅರ್ಹವಾಗಿರುವುದಿಲ್ಲ ಹಾಗೂ ಮೇಲಾಗಿ ದಾವೆಯಲ್ಲಿ ಯಾವುದಾದರೂ ತಾಂತ್ರಿಕ ದೋಷಗಳು ಇದ್ದಲ್ಲಿ ಅದನ್ನು ತಿದ್ದುಪಡಿಯ ಮೂಲಕ ಸರಿಪಡಿಸಿಕೊಳ್ಳುವ ಅವಕಾಶವಿದ್ದು,

ದಾವೆಯನ್ನು ಹಿಂಪಡೆದುಕೊಳ್ಳಲು ಅರ್ಜಿಯನ್ನು ಸಲ್ಲಿಸುವುದು ಸಮಂಜಸವಾಗಿರುವುದಿಲ್ಲ, ವಾದಿಯರು ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಕಾನೂನು ನಿಬಂಧನೆಗಳನ್ನು ದುರುಪಯೋಗಪಡಿಸಿಕೊಂಡು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ವಾದಿಯರು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿದ್ದಲ್ಲದೇ ಸರಿಯಾದ ಆಧಾರವಿಲ್ಲದೇ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂಬುದಾಗಿರುತ್ತದೆ.

11. ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 23 ನಿಯಮ 1 ರಲ್ಲಿ ಈ ಕೆಳಕಂಡಂತೆ ಉಲ್ಲೇಖವಿರುತ್ತದೆಃ-

*ದಾವೆಗಳನ್ನು ಹಿಂತೆಗೆದುಕೊಳ್ಳುವುದು ಮತ್ತು ಹೊಂದಾಣಿಕೆ ಮಾಡುವುದು (Withdrawal and Adjustment of Suits)*

*1. ದಾವೆಯನ್ನು ಹಿಂತೆಗೆದುಕೊಳ್ಳುವುದು ಅಥವಾ ಕ್ಲೇಮಿನ ಒಂದು ಭಾಗವನ್ನು ಬಿಟ್ಟುಕೊಡುವುದು (Withdrawal of suit or abandonment of part of claim) : 1) ದಾವೆಯನ್ನು ಹೂಡಿದ ಅನಂತರದ ಯಾವುದೇ ಕಾಲದಲ್ಲಿ, ಪ್ರತಿವಾದಿಗಳಲ್ಲಿ ಎಲ್ಲರ ವಿರುದ್ಧವಾಗಿ ಅಥವಾ ಯಾರ ವಿರುದ್ಧವಾಗಿಯಾದರೂ ವಾದಿಯು ತನ್ನ ದಾವೆಯನ್ನು ಬಿಟ್ಟುಕೊಡಬಹುದು ಅಥವಾ ತನ್ನ ಕ್ಲೇಮಿನ ಒಂದು ಭಾಗವನ್ನು ಬಿಟ್ಟುಕೊಡಬಹುದುಃ*

*ಪರಂತು, ವಾದಿಯು ಅಪ್ರಾಪ್ತ ವಯಸ್ಕನಾಗಿರುವಲ್ಲಿ ಅಥವಾ XXXII ನೇ ಕ್ರಮಾದೇಶದ 1 ರಿಂದ 14ರ ವರೆಗಿನ ನಿಯಮಗಳಲ್ಲಿ ಅಡಕವಾಗಿರುವ ಉಪಬಂಧಗಳು ಅನ್ವಯಿಸುವ ಇತರ ವ್ಯಕ್ತಿಯಾಗಿರುವಲ್ಲಿ, ದಾವೆಯನ್ನಾಗಲಿ ಅಥವಾ ಕ್ಲೇಮಿನ*

*ಯಾವುದೇ ಭಾಗವನ್ನಾಗಲೀ ನ್ಯಾಯಾಲಯದ ಅನುಮತಿಯಿಲ್ಲದೆ ಬಿಟ್ಟುಕೊಡತಕ್ಕುದಲ್ಲ.*

*2) (1)ನೇ ಉಪನಿಯವುದ ಪರಂತುಕದ ಮೇರೆಗಿನ ಅನುಮತಿಗಾಗಿ ಸಲ್ಲಿಸಲಾದ ಅರ್ಜಿಯ ಜೊತೆಯಲ್ಲಿ ವಾದ ಮಿತ್ರನ ಶಪಥಪತ್ರವು ಮತ್ತು ಅಪ್ರಾಪ್ತ ವಯಸ್ಕನು ಅಥವಾ ಅಂಥ ಇತರ ವ್ಯಕ್ತಿಯ ಪ್ಲೀಡರ್ ನಿಂದ ಪ್ರತಿನಿಧಿತನಾಗಿದ್ದರೆ, ಪ್ರಸ್ತಾಪಿತವಾಗಿರುವ ಬಿಟ್ಟು ಕೊಡುವಿಕೆಯು ಅಪ್ರಾಪ್ತ ವಯಸ್ಕನಿಗೆ ಅಥವಾ ಅಂಥ ಇತರ ವ್ಯಕ್ತಿಗೆ ತನ್ನ ಅಭಿಪ್ರಾಯದಲ್ಲಿ ಪ್ರಯೋಜನಕಾರಿಯಾಗಿದೆ ಎಂಬ ಬಗ್ಗೆ ಆ ಪ್ಲೀಡರ್ ನ ಪ್ರಮಾಣ ಪತ್ರವು ಸಹ ಇರತಕ್ಕುದು.*

*3) (ಎ) ಯಾವುದಾದರೂ ವಿಧ್ಯುಕ್ತ ನ್ಯೂನ್ಯತೆಯ ಕಾರಣದಿಂದಾಗಿ ದಾವೆಯು ವಿಫಲವಾಗತಕ್ಕುಂದು ಎಂದು, ಅಥವಾ*

*(ಬಿ) ದಾವೆಯ ವಸ್ತು ವಿಷಯದ ಬಗ್ಗೆ ಅಥವಾ ಕ್ಲೇಮಿನ ಭಾಗದ ಬಗ್ಗೆ ಹೊಸ ದಾವೆಯನ್ನು ಹೂಡಲು ವಾದಿಗೆ ಅವಕಾಶ ಕೊಡುವುದಕ್ಕಾಗಿ ಸಾಕಷ್ಟು ಆಧಾರಗಳಿವೆ ಎಂದು,*

*- ನ್ಯಾಯಾಲಯಕ್ಕೆ ಮನದಟ್ಟಾದಲ್ಲಿ, ಅದು, ತಾನು ಸೂಕ್ತವೆಂದು ಆಲೋಚಿಸುವಂಥ ನಿಬಂಧನೆಗಳ ಮೇಲೆ, ಅಂಥ ದಾವೆಯ ಅದೇ ವಸ್ತು ವಿಷಯದ ಅಥವಾ ಕ್ಲೇಮಿನ ಅಂಥ ಭಾಗದ ಸಂಬಂಧದಲ್ಲಿ ಹೊಸ ದಾವೆಯನ್ನು ಹೂಡುವ ಸ್ವಾತಂತ್ರ್ಯವನ್ನು ವಾದಿಗೆ ಕೊಟ್ಟು ಅಂಥ ದಾವೆಯನ್ನು ಅಥವಾ*

*ಕ್ಲೇಮಿನ ಭಾಗವನ್ನು ಹಿಂತೆಗೆದುಕೊಳ್ಳಲು ಅವನಿಗೆ ಅನುಮತಿಯನ್ನು ಕೊಡಬಹುದು.*

12. ನ್ಯಾಯಾಲಯವು ದಾವೆಯನ್ನು ಹಿಂದಿರುಗಿ ಪಡೆದುಕೊಳ್ಳಲು ಅನುಮತಿ ನೀಡಬೇಕಾದಲ್ಲಿ, ದಾವೆಯು ವಿಧ್ಯುಕ್ತ ಮತ್ತು ತಾಂತ್ರಿಕ ಕಾರಣದಿಂದ ದಾವೆಯು ವಿಫಲವಾಗತಕ್ಕುದು ಎಂಬುದರ ಬಗ್ಗೆ ವಾದಿಯು ಸಕಾರಣವನ್ನು ನೀಡಬೇಕಾಗುತ್ತದೆ. ಆ ಸಂದರ್ಭದಲ್ಲಿ ನ್ಯಾಯಾಲಯಕ್ಕೆ ಮನದಟ್ಟಾದ್ದಲ್ಲಿ ಅಂತಹ ದಾವೆಯಲ್ಲಿ ಹೊಸ ದಾವೆಯನ್ನು ಸಲ್ಲಿಸಲು ಅನುಮತಿಯನ್ನು ನೀಡಬಹುದಾಗಿದೆ. ವಾದಿಯು ಈ ಅರ್ಜಿಯಲ್ಲಿ ಎಲ್ಲಿಯೂ ಕೂಡ ಯಾವ ವಿಧ್ಯುಕ್ತ ಮತ್ತು ತಾಂತ್ರಿಕ ನ್ಯೂನ್ಯತೆಯಿಂದ ದಾವೆಯು ವಿಫಲವಾಗುತ್ತದೆ ಎನ್ನುವ ಬಗ್ಗೆ ನಿಖರವಾದ ವಿವರಣೆಯನ್ನು ಅರ್ಜಿಯಲ್ಲಿ ನಮೂದಿಸಿರುವುದಿಲ್ಲ. ಅರ್ಜಿಯಲ್ಲಿ ಅವರಿಗೆ ಇದೇ ದಾವೆಯ ವಸ್ತು ವಿಷಯಕ್ಕೆ ಸಂಬಂಧಪಟ್ಟಂತೆ ಸಮಗ್ರ ಪರಿಹಾರ ಕೋರಿ ದಾವೆಯನ್ನು ಸಲ್ಲಿಸಲು ಅನುಮತಿ ನೀಡಬೇಕೆಂದು ಕೋರಿಕೊಂಡಿದ್ದು, ಈ ದಾವೆಯಲ್ಲಿಯೂ ಕೂಡ ಈ ದೋಷವನ್ನು ಸರಿಪಡಿಸಕೊಳ್ಳಬಹುದಾಗಿದೆ. ಈಗಾಗಲೇ ಈ ದಾವೆಯನ್ನು ಸಲ್ಲಿಸಿ 7 ವರ್ಷಗಳೇ ದಾಟಿರುತ್ತದೆ. ನಿಖರವಾಗಿ ಯಾವ ತಾಂತ್ರಿಕ ದೋಷದಿಂದ ದಾವೆಯು ವಿಫಲವಾಗುತ್ತದೆ ಎನ್ನುವ ಬಗ್ಗೆ ಯಾವುದೇ ನಿಖರವಾದ ವಿವರಣೆಯು ನ್ಯಾಯಾಲಯದ ಸಮಕ್ಷಮ ಇರುವುದಿಲ್ಲ. ಅರ್ಜಿಯನ್ನು ಪುರಸ್ಕರಿಸಲು ಯೋಗ್ಯವಾಗಿರುವುದಿಲ್ಲವೆಂದು ತೀರ್ಮಾನಕ್ಕೆ ಬಂದು, ಅಂಶ-1 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

13. <u>ಅಂಶ-2</u>- ಮೇಲೆ ಹೇಳಿದ ಕಾರಣಗಳಿಂದ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## ಆದೇಶ

ಅರ್ಜಿದಾರರು / 2 ನೇ ವಾದಿಯು ಸಲ್ಲಿಸಿದಂತಹ ಮಧ್ಯಂತರ ಅರ್ಜಿ-23, ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ XXIII ನಿಯಮ 1 ಸಹವರ್ತಿ ಕಲಂ 151 ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ರೂ.250/- ಗಳ ಖರ್ಚಿನೊಂದಿಗೆ ವಜಾಗೊಳಿಸಲಾಗಿದೆ.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ, ನಂತರ ಓದಿ, ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ 1 ನೇ ಏಪ್ರಿಲ್-2023 ರಂದು ಘೋಷಿಸಲಾಯಿತು)

ಸಹಿ/-
(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕಡೂರು.